# ಈ ತೆಂಗಿನಕಾಯಿ ಬಲು ಭಾರ



ನಮ್ಮ ನೆಂಟರು ಪದ್ಮಾವತಿ ಅಂತ ಗೋವಾದಲ್ಲಿ ಇದ್ದಾರೆ. ಚಿತ್ರದಲ್ಲಿರುವುದು ಅವರ ತೋಟದಲ್ಲಿ ಬೆಳೆದ ದೊಡ್ಡ ಗಾತ್ರದ ತೆಂಗಿನಕಾಯಿ. ಅಂದಾಜು ಎರಡೂವರೆ ಕೆಜಿ ತೂಕವಿದೆ. ನಾವು ಅಲ್ಲಿಗೆ ಹೋದಾಗ ಕುಂಕುಮವಿಟ್ಟು ನಮಗೆ ಕೊಟ್ಟರು. ಒಳಗಿನ ಕಾಯಿ ಸಹ ದಪ್ಪಗಿತ್ತು.

**-ಲೀಲಾ ಚಂದ್ರಶೇಖರ, ಬೆಂಗಳೂರು**



# ಗೋಡೆ ತುಂಬ ವೀಳ್ಯದೆಲೆ

ವೀಳ್ಯದೆಲೆಯ ಕೃಷಿ ಮಾಡುವುದಾದರೆ ಅದರ ಬಳ್ಳಿಗೆ ಆಧಾರವಾಗಲು ಕಾಡಿನಿಂದ ಮರದ ಕೊಂಬೆಗಳನ್ನು ಕಡಿದು ತಂದು ಗೂಟ ಹಾಕುವುದು ಅನಿವಾರ್ಯ. ಇಲ್ಲವಾದರೆ ತೆಂಗು, ಅಡಕೆ, ಹಾಲುವಾಣದಂತಹ ಮರಗಳ ಆಧಾರವಾದರೂ ಬೇಕು. ಆದರೆ ಬೆಳ್ತಂಗಡಿಯ ಬಳಂಜದ ಕೋಡಿಂಜೆ ಗೋಪಾಲಕೃಷ್ಣ ಭಟ್ಟರು ವೀಳ್ಯದೆಲೆಯ ಬಳ್ಳಿಗಳಿಗೆ ಮನೆಯ ಗೋಡೆಗಳನ್ನೇ ಆಧಾರವಾಗಿ ನೀಡಿದ್ದಾರೆ. ಗೋಡೆಯ ಬುಡದಲ್ಲಿ ಬಳ್ಳಿಗಳನ್ನು ನೆಟ್ಟು ಗೊಬ್ಬರ ಹಾಕಿ ನೀರೆರೆದಿದ್ದಾರೆ. ಬಳ್ಳಿಗಳು ಗೋಡೆಗೆ ಅಂಟಿಕೊಂಡು ನಂತರ ಮೇಲೆ ಏರುತ್ತ ತಾರಸಿಯವರೆಗೂ ಹಬ್ಬಿಕೊಂಡು ಸಮೃದ್ಧವಾಗಿ ಎಲೆಗಳನ್ನು ಕೊಡುತ್ತಿವೆ. ಮನೆಗೂ ತಂಪು ನೀಡಿವೆ.

**-ಪ.ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ**

# ಕುಕೊ ಸ್ಪಿಟ್

ಈ ರೀತಿ ಗರಿಕೆಹುಲ್ಲಿನ ಕಾಂಡದ ಮೇಲೆ ಯಾರೋ ಉಗಿದಿರುವ ಎಂಜಲಿನಂತೆ ಕಾಣುವ ಪದಾರ್ಥವನ್ನು ನೀವು ನೋಡಿರಬಹುದು. ಸೂರ್ಯ ಉದಯಿಸುವ ಮುನ್ನವೇ ಮನೆಯಿಂದ ಹೊರಬರುವ ರೈತಾಪಿವರ್ಗ ಹಾಗೂ ವಾಯುವಿಹಾರಿಗಳಿಗೆ ಇದು ಸರ್ವೇಸಾಮಾನ್ಯವಾಗಿ ಕಾಣುತ್ತಿರುತ್ತದೆ. ಆದರೆ ಹಲವರಿಗೆ ಇದರ ಹಿಂದಿನ ರಹಸ್ಯ ತಿಳಿದಿರಲಿಕ್ಕಿಲ್ಲ. ಇದು ಬಹುತೇಕರ ನಂಬಿಕೆಯಂತೆ ಇಬ್ಬನಿಯು ಒಟ್ಟುಗೂಡಿರುವುದೂ ಅಲ್ಲ. ಸ್ಪಿಟ್‌ಬಗ್ ಅಥವಾ ಕುಕೊ ಜಾತಿಗೆ ಸೇರಿದ ಹಲವು ಕೀಟಗಳು ತಮ್ಮ ಮೊಟ್ಟೆಗಳನ್ನು ರಕ್ಷಿಸಿಕೊಳ್ಳುವ ಸಲುವಾಗಿ ಈ ರೀತಿಯ ದ್ರವವನ್ನು ವಿಸರ್ಜಿಸಿರುತ್ತವೆ. ತಮ್ಮ ಆಹಾರವು ಇತರರ ಪಾಲಾಗಬಾರದೆಂಬ ಉದ್ದೇಶದಿಂದಲೂ ಅವು ಈ ರೀತಿ ಮಾಡುತ್ತವೆ ಎಂಬುದು ಸಂಶೋಧಕರ ನಂಬಿಕೆ. ಇದಕ್ಕೆ ಕುಕೊ ಸ್ಪಿಟ್ ಎಂದು ಹೆಸರು.

**-ಪ.ನಾ.ಹಳ್ಳಿ. ಹರೀಶ್ ಕುಮಾರ್, ತುಮಕೂರು**

